# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಪ್ರಾಸಾ-22 ಚಾಸಾ-55)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 07.09.2022

| | | |
|---|---|---|
| ಸಾಕ್ಷಿದಾರರ ಹೆಸರು | - | ರಮೇಶ್, |
| ತಂದೆಯ ಹೆಸರು | - | ಆಂಜಿನಪ್ಪ, |
| ವಯಸ್ಸು | - | 49 ವರ್ಷ, |
| ಉದ್ಯೋಗ | - | ಖಾಸಗಿ ಕೆಲಸ, |
| ವಾಸ | - | ವಿಶ್ವನಾಥಪುರ. |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

ಪ್ರಾಸಾ-1 ಮತ್ತು ಚಾಸಾ-54 ಇವರ ಪರಿಚಯ ಇಲ್ಲ. ಈಗ ತೋರಿಸಲಾದ ನಿಪಿ-2 ರಿಂದ 4 ಇವುಗಳ ಮೇಲೆ ನನ್ನ ಸಹಿ ಇವೆ. ಸಾಕ್ಷಿದಾರರು ಗುರ್ತಿಸಿದ ಸಹಿಗಳನ್ನು ನಿಪಿ-2(ಬಿ)ಯಿಂದ ನಿಪಿ-4(ಬಿ) ಎಂದು ಗುರ್ತಿಸಲಾಯಿತು. ಸಾಕ್ಷಿದಾರರು ಮುಂದುವರಿದು ನಾನು ಒಂದೇ ಸಹಿ ಮಾಡಿದ್ದೇನೆ ಎನ್ನುತ್ತಾರೆ. ನಿಪಿ-2 ರಿಂದ 4 ದಾಖಲೆಗಳಿಗೆ ಈಗ ಸುಮಾರು 12 ವರ್ಷಗಳ ಹಿಂದೆ ವಿಶ್ವನಾಥಪುರ ಪೋಲಿಸ್ ಠಾಣೆಯ ಮಂಭಾಗ ಟೀ ಅಂಗಡಿಯಲ್ಲಿ ಸಹಿ ಮಾಡಿದ್ದೇನೆ. ಈಗ ತೋರಿಸಿದ ಮು.ಮಾ-9 ರಿಂದ 15 ಬಟ್ಟೆಗಳನ್ನು ನಾನು ನೋಡಿಲ್ಲ ಮತ್ತು ಅವುಗಳನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿಲ್ಲ. ಸದರಿ ಮು.ಮಾ-9 ರಿಂದ 15 ಇವುಗಳ ಮೇಲಿನ ಸಹಿ ಚೀಟಿಗಳನ್ನು ತೋರಿಸಲಾಗಿ ಅವುಗಳಲ್ಲಿ ತಮ್ಮ ಸಹಿ ಇಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

2. ದಿಃ04.03.2010 ರಂದು ಬೆಳಗ್ಗೆ 9 ಘಂಟೆಗೆ ಪೋಲಿಸರು ನನ್ನನ್ನು ಮತ್ತು ಚಾಸಾ-54

ಇವರನ್ನು ಸಾಕ್ಷಿದಾರರಾಗಿ ವಿಶ್ವನಾಥಪುರ ಪೋಲಿಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಅಲ್ಲಿ ಪ್ರಾಸಾ-1 ರಿಂದ 3 ಠಾಣೆಯಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ಪ್ರಾಸಾ-1 ಇವರು ಮು.ಮಾ-9 ಮತ್ತು 10 ಬಟ್ಟೆಗಳನ್ನು ಹಾಜರುಪಡಿಸಿದರು ಮತ್ತು ಅವುಗಳು ರಕ್ತದ ಕಲೆಯಾಗಿದ್ದವು ಮತ್ತು ಅಲ್ಲಲ್ಲಿ ಹರಿದಿದ್ದವು ಎಂದರೆ ಸರಿಯಲ್ಲ. ಪೋಲಿಸರು ಅವುಗಳನ್ನು ನಿಪಿ-2 ರಂತೆ ನಮ್ಮ ಸಮಕ್ಷಮ ಬೆಳಗ್ಗೆ 9 ರಿಂದ 9.45 ರವರೆಗೆ ಮಹಜರ್ ಮಾಡಿ ಅವುಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅವುಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಮೊಹರು ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ.

3. ನಂತರ ಪ್ರಾಸಾ-2 ಇವರು ಹಾಜರುಪಡಿಸಿದ ಮು.ಮಾ-11 ರಿಂದ 13 ಬಟ್ಟೆಗಳನ್ನು ಪೋಲಿಸರು ನಿಪಿ-3 ರಂತೆ ನಮ್ಮ ಸಮಕ್ಷಮ ಬೆಳಗ್ಗೆ 10 ರಿಂದ 10.45 ರವರೆಗೆ ಮಹಜರ್ ಮಾಡಿ ಅವುಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅವುಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಮೊಹರು ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ಸದರಿ ಬಟ್ಟೆಗಳಿಗೂ ಸಹ ರಕ್ತ ಕಲೆಯಾಗಿದ್ದವು ಎಂದರೆ ಸರಿಯಲ್ಲ.

4. ನಂತರ ಪ್ರಾಸಾ-3 ಇವರು ಹಾಜರುಪಡಿಸಿದ ಮು.ಮಾ-14 ಮತ್ತು 15 ಬಟ್ಟೆಗಳನ್ನು ಪೋಲಿಸರು ನಿಪಿ-4 ರಂತೆ ನಮ್ಮ ಸಮಕ್ಷಮ ಬೆಳಗ್ಗೆ 11 ರಿಂದ 11.45 ರವರೆಗೆ ಮಹಜರ್ ಮಾಡಿ ಅವುಗಳನ್ನು ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಅವುಗಳನ್ನು ಬಿಳಿ ಬಟ್ಟೆ ಚೀಲದಲ್ಲಿ ಹಾಕಿ ಎ ಎಂಬ ಅಕ್ಷರದಿಂದ ಮೊಹರು ಮಾಡಿ ಅವುಗಳಿಗೆ ನಮ್ಮ ಸಹಿ ಚೀಟಿಗಳನ್ನು ಅಂಟಿಸಿದರು ಎಂದರೆ ಸರಿಯಲ್ಲ. ಸದರಿ ಬಟ್ಟೆಗಳಿಗೂ ಸಹ ರಕ್ತ ಕಲೆಯಾಗಿದ್ದವು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು